# ಹರಿಕಥಾಮೃತಸಾರ - ೧೬

## ದತ್ತ ಸ್ವಾತಂತ್ರ್ಯ ಸಂಧಿ

ಹರಿಕಥಾಮೃತಸಾರ ಗುರುಗಳ | ಕರುಣದಿಂದಾಪನಿತು ಪೇಳುವೆ |
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ||

ಕಾರುಣಿಕ ಹರಿ ತನ್ನೊಳಿಪ್ಪಾ|ಪಾರ ಸ್ವಾತಂತ್ರಯ ಗುಣದಿ ನಾ |
ನೂರು ತೆಗೆದು ಸಪಾದ ಆರೊಂದಧಿಕ ಆರುವತ್ತು ||
ನಾರಿಗಿತ್ತು ದ್ವಿಷೋಡಶಾಧಿಕ|ನೂರು ಪಾದತ್ರಯವ ತನ್ನ ಶ |
ರೀರದೊಳಗೀಪರಿ ವಿಭಾಗವ ಮಾಡಿ ತ್ರಿಪದಾಹ್ವ || ||೧೬-೦೧||

ಸತ್ಯಲೋಕಾಧಿಪನೊಳಗೆ ಐ|ವತ್ತೆರಡು ಪವಮಾನನೊಳು ನಾ |
ಲ್ವತ್ತು ಮೇಲೆಂಟಧಿಕ ಶಿವನೊಳಗಿಟ್ಟನಿಪ್ಪತ್ತು ||
ಚಿತ್ತಜೇಂದ್ರರೊಳೈದಧಿಕದಶ|ತತ್ವಮಾನಿಗಳೆನಿಪ ಸುರರೊಳು |
ಹತ್ತು ಈರೈದಖಿಳಜೀವರೊಳಿಟ್ಟ ನಿರವದ್ಯ || ||೧೬-೦೨||

ಕಲಿ ಮೊದಲುಗೊಂಡಖಿಳ ದಾನವ|ರೊಳಗೆ ನಾಲ್ವತ್ತೈದು ಈ ಪರಿ |
ತಿಳಿದುಪಾಸನೆಮಾಡು ಮರೆಯದೆ ಪರಮಭಕುತಿಯಲಿ ||
ಇಳೆಯೊಳಗೆ ಸಂಚರಿಸು ಲಕುಮೀ|ನಿಲಯನಾಳಾಳೆಂದು ಸರ್ವ |
ಸ್ಥಳಗಳಲಿ ಸಂತೈಸು-ತಿಪ್ಪನು ಗೆಳೆಯನಂದದಲಿ || ||೧೬-೦೩||

ಅವನಿಪ ಸ್ವಾಮಿತ್ವ ಧರ್ಮವ | ಸ್ವವಶಮಾತ್ಯರಿಗಿತ್ತು ತಾ ಮ |
ತ್ತವರ ಮುಖದಲಿ ರಾಜಕಾರ್ಯವ ಮಾಡಿಸುವ ತೆರದಿ ||
ಕವಿಭಿರೀಡಿತ ತನ್ನ ಕಳೆಗಳ | ದಿವಿಜ ದಾನವ ಮಾನವರೊಳಿ |
ಟ್ಟವಿರತ ಗುಣತ್ರಯಜ ಕರ್ಮವ ಮಾಡಿ ಮಾಡಿಸುವ || ||೧೬-೦೪||

ಪುಣ್ಯಪಾಪಗಳೀ ತೆರದಿ ಕಾ|ರುಣ್ಯಸಾಗರ ದೇವದಾನವ |
ಮಾನವರೊಳಿಟ್ಟವರ ಫಲವ್ಯತ್ಯಾಸವನೆ ಮಾಡಿ ||
ಬನ್ನ ಬಡಿಸುವ ಭಕ್ತಿಹೀನರ | ಸನ್ನುತ ಸುಕರ್ಮಗಳ ತೆಗೆದು ಪ್ರ |
ಪನ್ನರಿಗೆ ಕೊಟ್ಟವರ ಸುಖಬಡಿಸುವನು ಸುಭುಜಾಹ್ವ || ||೧೬-೦೫||

ಮಾಣಿಕವ ಕೊಂಡುಗಡಿಯೊಳಜಿ|ವಾನ ಕೊಟ್ಟಾಪುರುಷನ ಸಮಾ |
ಧಾನ ಮಾಡುವ ತೆರದಿ ದೈತ್ಯರು ನಿತ್ಯದಲಿ ಮಾಳ್ಪ ||
ದಾನಯಜ್ಞಾದಿಗಳ ಫಲ ಯಜ|ಮಾನ ತಾನಪಹರಿಸಿ ಅಸಮೀ |
ಚೀನ ಸುಖಗಳ ಕೊಟ್ಟು ಅಸುರರ ಮತ್ತರನು ಮಾಳ್ಪ || ||೧೬-೦೬||

ಏಣಲಾಂಛನನಮಲಕಿರಣ ಕ್ರಮೇಣ ವೃದ್ಧಿಯನೈದಿ ಲೋಗರ ।
ಕಾಣಗೊಡದಿಹ ಕತ್ತಲೆಯ ಭಂಗಿಸುವ ತೆರದಂತೆ ॥
ವೈನತೇಯಾಂಸಗನ ಮೂರ್ತಿಧ್ಯಾನವುಳ್ಳ ಮಹಾತ್ಮರಿಗೆ ಸು ।
ಜ್ಞಾನ ಭಕ್ತ್ಯಾದಿಗಳು ವರ್ಧಿಸಿ ಸುಖವ ಕೊಡುತಿಹವು ॥ ॥೧೭-೦೭॥

ಜನಪನರಿಕೆಯ ಚೋರ ಪಗಲೊಳು ಧನವ ಕದ್ದೊಯ್ದೀಯಲವನವ ।
ಗುಣಗಳೆಣಿಸದೆ ಪೊರೆವ ಕೊಡದಿರೆ ಶಿಕ್ಷಿಸುವ ತೆರದಿ ॥
ಅನುಚಿತೋಚಿತಕರ್ಮ ಕೃಷ್ಣಾರ್ಪಣವೆನಲು ಕೈಗೊಂಡು ತನ್ನರ ।
ಮನೆಯೊಳಿಟ್ಟಾನಂದಬಡಿಸುವ ಮಾಧವಾನತರ ॥ ॥೧೭-೦೮॥

ಅನ್ನದನ್ನಾದನ್ನನಾಮಕ । ಮುನ್ನ ಪೇಳ್ದ ಪ್ರಕಾರ ಜೀವರೊ ।
ಳನ್ನರೂಪ ಪ್ರವೇಶಗೈದವರವರ ವ್ಯಾಪಾರ ॥
ಬನ್ನಬಡದಲೆ ಮಾಡಿ ಮಾಡಿಸಿ । ಧನ್ಯರಿವರಹುದೆಂದೆನಿಸಿ ತ್ರೈ ।
ಗುಣ್ಯವರ್ಜಿತ ತತ್ತದಾಹ್ವಯನಾಗಿ ಕರೆಸುವನು ॥ ॥೧೭-೦೯॥

ಸಲಿಲಬಿಂದು ಪಯೋಬ್ಧಿಯೊಳು ಬೀಳಲು ವಿಕಾರವನೈದಬಲ್ಲದೆ ।
ಜಲವು ತದ್ರೂಪವನೆ ಐದುವುದೆಲ್ಲಕಾಲದಲಿ ॥
ಕಲಿಮಲಾಪಹನರ್ಚಿಸುವ ಸತ್ಕುಲಜರ ಕುಕರ್ಮಗಳು ತಾನಿ ।
ಷ್ಕಲುಷಕರ್ಮಗಳಾಗಿ ಪುರುಷಾರ್ಥಗಳ ಕೊಡುತಿಹವು ॥ ॥೧೭-೧೦॥

ಮೊಗದೊಳಗೆ ಮೊಗವಿಟ್ಟು ಮುದ್ದಿಸಿ । ಮಗುವಿನಂ ಬಿಗಿದಪ್ಪಿ ಸ್ನೇಹದಿ ।
ತೆಗೆದು ತನ್ನ ಸ್ತನಗಳುಣಿಸುವ ಜನನಿಯಂದದಲಿ ॥
ಅಗಣಿತಾತ್ಮನು ತನ್ನ ಪಾದಾಬ್ಜಗಳ ಧೇನಿಪ ಭಕ್ತಜನರಿಗೆ ।
ಪ್ರಘಟಕನು ತಾನಾಗಿ ಸೌಖ್ಯಗಳೀವ ಸರ್ವತ್ರ ॥ ॥೧೭-೧೧॥

ತೋಟಿಗನು ಭೂಮಿಯೊಳು ಬೀಜವ । ನಾಟಬೇಕೆಂದೆನುತ ಹಿತದಲಿ ।
ಮೋಟೆಯಿಂ ನೀರೆತ್ತಿ ಸಸಿಗಳ ಸಂತೈಸುವಂತೆ ॥
ವಾಟಬಡದಲೆ ಜಗದಿ ಜೀವರ । ಘೋಟಕಾಸ್ಯನು ಸೃಜಿಸಿ ಯೋಗ್ಯತೆ ।
ದಾಟಗೊಡದಲೆ ಸಲಹುತಿಪ್ಪನು ಸರ್ವಕಾಲದಲಿ ॥ ॥೧೭-೧೨॥

ಭೂಮಿಯೊಳು ಜಲವಿರೆ ತೃಷಾರ್ತನು । ತಾ ಮರೆದು ಮೊಗವೆತ್ತಿ ಎಣ್ದೇಸೆ ।
ವ್ಯೋಮಮಂಡಲದೊಳಗೆ ಕಾಣದೆ ಮಿಡುಕುವಂದದಲಿ ॥
ಶ್ರೀಮನೋರಮ ಸರ್ವರಂತರ್ಯಾಮಿಯಾಗಿರೆ ತಿಳಿಯದನುದಿನ ।
ಭ್ರಾಮಕರು ಭಜಿಸುವರು ಭಕುತಿಯಲನ್ಯದೇವತೆಯ ॥ ॥೧೭-೧೩॥

ಮುಖ್ಯಫಲ ವೈಕುಂಠ ಮುಖ್ಯಾಮುಖ್ಯಫಲ ಮಹರಾದಿಲೋಕಾ ।
ಮುಖ್ಯಫಲ ವೈಷಯಿಕವೆಂದರಿದತಿಭಕುತಿಯಿಂದ ॥
ರಕ್ಕಸಾರಿಯ ಭಜಿಸುತಲೀ ನಿರ್ದುಃಖನಾಗು ನಿರಂತರದಿ ಮೊರೆ ।
ಪೊಕ್ಕವರ ಬಿಡ ಭಕ್ತವತ್ಸಲ ಭಾರತೀಶಪಿತ ॥ ॥೧೬-೧೪॥

ವ್ಯಾಧಿಯಿಂ ಪೀಡಿತ ಶಿಶುವಿಗೆ ಗುಡೋದಕವ ನೆರದದಕೆ ಔಷಧ ।
ತೀದು ಕುಡಿಸುವ ತಾಯಿಯೋಪಾದಿಯಲಿ ಸರ್ವಜ್ಞ ॥
ಬಾದರಾಯಣ ಭಕ್ತಜನಕೆ ಪ್ರಸಾದರೂಪಕನಾಗಿ ಭಾಗವ ।
ತಾದಿಯಲಿ ಪೇಳಿದನು ಧರ್ಮಾರ್ಥಗಳೆ ಫಲವೆಂದು ॥ ॥೧೬-೧೫॥

ದೂರದಲ್ಲಿಹ ಪರ್ವತ ಘನಾಕಾರ ತೋರ್ಪುದು ನೋಳ್ಪ ಜನರಿಗೆ ।
ಸಾರೆಗೈಯ್ಯಲು ಸರ್ಪವ್ಯಾಘ್ರಗಳಿಂದ ಭಯವಿಹುದು ॥
ಘೋರತರ ಸಂಸಾರಸೌಖ್ಯಾಸಾರತರವೆಂದರಿದು ನಿತ್ಯ ರ ।
ಮಾರಮಣನಾರಧಿಸುವರದರಿಂದ ಬಲ್ಲವರು ॥ ॥೧೬-೧೬॥

ಕೆಸರ ಘಟಗಳ ಮಾಡಿ ಬೇಸಿಗೆ । ಬಿಸಿಲೊಳಿಟ್ಟೊಣಗಿಸಿದರದು ಘನ ।
ರಸವ ತುಂಬಲುಬಹುದೆ ಸರ್ವಸ್ವತಂತ್ರ ತಾನೆಂಬ ॥
ಪಶುಪನರನೇನೇನು ಮಾಳ್ಪಾನಶನದಾನಸ್ನಾನ ಕರ್ಮಗ ।
ಳೊಸರಿ ಪೋಪವು ಬರಿದೆ ದೇಹಾಯಾಸವನೆ ಕೊಟ್ಟು ॥ ॥೧೬-೧೭॥

ಎರಡು ದೀಕ್ಷೆಗಳಿಹವು ಬಾಹ್ಯಾಂತರವೆನಿಪ ನಾಮದಲಿ ಬುಧರಿಂ ।
ದರಿತು ದೀಕ್ಷಿತನಾಗು ದೀರ್ಘದ್ವೇಷಗಳ ಬಿಟ್ಟು ॥
ಹರಿಯೆ ಸರ್ವೋತ್ತಮ ಕ್ಷರಾಕ್ಷರ । ಪುರುಷಪೂಜಿತಪಾದ ಜನ್ಮಾ ।
ದ್ಯರವಿದೂರ ಸುಖಾತ್ಮ ಸರ್ವಗನೆಂದು ಸ್ಮರಿಸುತಿರು ॥ ॥೧೬-೧೮॥

ಹೇಯವಸ್ತುಗಳಿಲ್ಲ ಉಪಾದೇಯವಸ್ತುಗಳಿಲ್ಲ ನ್ಯಾಯಾ ।
ನ್ಯಾಯಧರ್ಮಗಳಿಲ್ಲ ದ್ವೇಷಾಸೂಯೆ ಮೊದಲಿಲ್ಲ ॥
ತಾಯಿತಂದೆಗಳಿಲ್ಲ ಕಮಲದಳಾಯತಾಕ್ಷನೆ ಎನಲು ಈಸುವ ।
ಕಾಯಿಯಂದದಿ ಮುಳುಗಗೊಡದೆ ಭವಾಬ್ಧಿ ದಾಟಿಸುವ ॥ ॥೧೬-೧೯॥

ಮಂದನಾದರು ಸರಿಯೇ ಗೋಪೀಚಂದನ ಶ್ರೀಮುದ್ರೆಗಳ ನಲ ।
ವಿಂದ ಧರಿಸುತ ಶ್ರೀತುಲಸಿಪದ್ಮಾಕ್ಷಸರಗಳನು ॥
ಕಂಧರದ ಮಧ್ಯದಲಿ ಧರಿಸಿ ಮುಕುಂದ ಶ್ರೀಭೂರಮಣ ತ್ರಿಜಗ ।
ದ್ವಂದ್ಯ ಸರ್ವಸ್ವಾಮಿ ಮಮಕುಲದೈವವೆನೆ ಪೊರೆವ ॥ ॥೧೬-೨೦॥

ಪ್ರಾಯಧನಮದದಿಂದ ಜನರಿಗೆ । ನಾಯಕ ಪ್ರಭುವೆಂಬಿ ಪೂರ್ವದಿ ।
ತಾಯಿಪೊಟ್ಟೆಯೊಳಿರಲು ಪ್ರಭುವೆಂದೇಕೆ ಕರೆಯರೆಲ್ಲೈ ॥
ಕಾಯ ನಿನ್ನನು ಬಿಟ್ಟು ಪೋಗಲು । ರಾಯ ನೀನೆಂಬುವ ಪ್ರಭುತ್ವ ಪ ।
ಲಾಯನವನೈದಿತು ಸಮೀಪದಲಿದ್ದರದು ತೋರು ॥ ||೧೬-೨೦||

ವಾಸುದೇವೈಕಪ್ರಕಾರದಿ । ಈಶನೆನಿಸುವ ಬ್ರಹ್ಮ ರುದ್ರ ಶ ।
ಚೀಶ ಮೊದಲಾದಮರರೆಲ್ಲರು ದಾಸರೆನಿಸುವರು ॥
ಈ ಸುಮಾರ್ಗವ ಬಿಟ್ಟು ಸೋಹಮು।ಪಾಸನೆಯ ಗೈವ ನರ ದೇಹಜ ।
ದೈಶಿಕ ಕ್ಲೇಶಗಳು ಬರಲವನೇಕೆ ಬಿಡಿಸಿಕೊಳ ॥ ||೧೬-೨೧||

ಆ ಪರಬ್ರಹ್ಮನಲಿ ತ್ರಿಜಗ।ದ್ವ್ಯಾಪಕತ್ವ ನಿಯಾಮಕತ್ವ ।
ಸ್ಥಾಪಕತ್ವ ವಶತ್ವ ಈಶತ್ವಾದಿಗುಣಗಳಿಗೆ ॥
ಲೋಪವಿಲ್ಲೇಕಪ್ರಕಾರ ಸ್ವರೂಪವೆನಿಪ್ಪವು ಸರ್ವಕಾಲದಿ ।
ಪೋಪುವಲ್ಲವು ಜೀವರಿಗೆ ದಾಸತ್ವದೋಪಾದಿ ॥ ||೧೬-೨೩||

ನಿತ್ಯನೂತನ ನಿರ್ವಿಕಾರ ಸು।ಹೃತ್ತಮ ಪ್ರಣವಸ್ಥ ವಹ್ನೋ ।
ತ್ಪತ್ತಿ ಕಾರಣ ವಾಙ್ಮನೋಮಯ ಸಾಮಗಾನರತ ॥
ದತ್ತ ಕಪಿಲ ಹಯಾಸ್ಯ ರೂಪದಿ । ಪೃಥಕ್ ಪೃಥಕ್ ಜೀವರೊಳಗಿದ್ದು ಪ್ರ ।
ವರ್ತಿಸುವನವರವರ ಯೋಗ್ಯತೆ ಕರ್ಮವನುಸರಿಸಿ ॥ ||೧೬-೨೪||

ಶ್ರುತಿಗಳಾತನ ಮಾತು ವಿಮಲ । ಸ್ಮೃತಿಗಳಾತನ ಶಿಕ್ಷೆ ಜೀವ ।
ಪ್ರತತಿ ಪ್ರಕೃತಿಗಳೆರಡು ಪ್ರತಿಮೆಗಳೆನಿಸಿಕೊಳುತಿಹವು ॥
ಇತರ ಕರ್ಮಗಳೆಲ್ಲ ಲಕುಮೀ।ಪತಿಗೆ ಪೂಜೆಗಳೆಂದು ಸ್ಮರಿಸುತ ।
ಚತುರವಿಧ ಪುರುಷಾರ್ಥಗಳ ಬೇಡದಿರು ಸ್ವಪ್ನದಲಿ ॥ ||೧೬-೨೫||

ಭೂತಳಾಧಿಪನಾಜ್ಞಧಾರಕ । ದೂತರಿಗೆ ಸೇವಾನುಸಾರದಿ ।
ವೇತನವ ಕೊಟ್ಟವರ ಸಂತೋಷಿಸುವ ತೆರದಂತೆ ॥
ಮಾತರಿಶ್ವಪ್ರಿಯನು ಪರಮ।ಪ್ರೀತಿಪೂರ್ವಕ ಸದ್ಗುಣಂಗಳ ।
ಗಾಯಕರ ಸಂತೋಷಬಡಿಸುವ ಇಹಪರಂಗಳಲಿ ॥ ||೧೬-೨೬||

ದೀಪ ದಿವದಲಿ ಕಂಡರಾದಡೇ । ಲೋಪಗೈ ಸುವರಾಕ್ಷಣ ಹರಿ ಸ ।
ಮೀಪದಲ್ಲಿರೆ ನಂದನಾಮ ಸುನಂದವೆನಿಸುವುವು ॥
ಔಪಚಾರಿಕವಲ್ಲ ಸುಜನರ । ಪಾಪಕರ್ಮವು ಪುಣ್ಯವೆನಿಪುದು ।
ಪಾಪಿಗಳ ಸತ್ಪುಣ್ಯಕರ್ಮವು ಪಾಪವೆನಿಸುವುವು ॥ ||೧೬-೨೭||

ಧನವ ಸಂಪಾದಿಸುವ ಪ್ರದ್ರಾವಣಿಕರಂದದಿ ಕೋವಿದರ ಮನೆ ।
ಮನೆಗಳಲಿ ಸಂಚರಿಸು ಶಾಸ್ತ್ರಶ್ರವಣಗೋಸುಗದಿ ॥
ಮನನಗೈದುಪದೇಶಿಸುತ ದುರ್ಜನರ ಕೂಡಾಡದಿರು ಸ್ವಪ್ನದಿ ।
ಪ್ರಣತಕಾಮದ ಕೊಡುವ ಸೌಖ್ಯಗಳಿಹಪರಂಗಳಲಿ ॥ ॥೧೬-೧೮॥

ಕಾರಕಕ್ರಿಯದ್ರವ್ಯವಿಭ್ರಮ।ಮೂರು ವಿಧಜೀವರಿಗೆ ಬಹು ಸಂ ।
ಸಾರಕಿವು ಕಾರಣವೆನಿಸುವವು ಎಲ್ಲ ಕಾಲದಲಿ ॥
ದೂರ ಓಡಿಸಿ ಭ್ರಾಮಕತ್ರಯ । ಮಾರಿಗೊಳಗಾಗದಲೆ ಸರ್ವಾ ।
ಧಾರಕನ ಚಿಂತಿಸುತಲಿರು ಸರ್ವತ್ರ ಮರೆಯದಲೆ ॥ ॥೧೬-೧೯॥

ಕರಣಕರ್ಮವ ಮಾಡಿದರೆ ವಿಸ್ಮರಣೆಕಾಲದಿ ಮಾತುಗಳಿಗು ।
ತ್ತರವ ಕೊಡದಲೆ ಸುಮ್ಮನಿಪ್ಪನು ಜಾಗರಾವಸ್ಥೆ ॥
ಕರುಣಿಸಲು ವ್ಯಾಪಾರ ಮಾಡುವ । ಬರಲು ನಾಲ್ಕಾವಸ್ಥೆಗಳು ಪರಿ ।
ಹರಿಸಿಕೊಳಸೇತಕೆ ಸ್ವತಂತ್ರನು ತಾನೆ ಎಂಬುವನು ॥ ॥೧೬-೨೦॥

ಯುಕ್ತಿಮಾತುಗಳಲ್ಲ ಶ್ರುತಿಸ್ಮೃತ್ಯುಕ್ತಮಾತುಗಳಿವು ವಿಚಾರಿಸೆ ।
ಮುಕ್ತಿಗಿವು ಸೋಪಾನವೆನಿಪುವು ಪ್ರತಿಪ್ರತೀ ಪದವು ।
ಭಕ್ತಿಪೂರ್ವಕ ಪಠಿಸುವವರಿಗೆ । ವ್ಯಕ್ತಿ ಕೊಡುವ ಸ್ವರೂಪಸುಖ ಪ್ರವಿ ।
ವಿಕ್ತರನೆ ಮಾಡುವನು ಭವಭಯದಿಂದ ಬಹುರೂಪ ॥ ॥೧೬-೨೧॥

ಶ್ರೀನಿವಾಸನ ಸುಗುಣಮಣಿಗಳ । ಪ್ರಾಣಮತ ವಯುನಾಖ್ಯ ಸೂತ್ರದಿ ।
ಪೋಣಿಸಿದ ಮಾಲಿಕೆಯ ವಾಙ್ಮಯಂಗೀ ಸಮರ್ಪಿಸಿದ ॥
ಜ್ಞಾನಿಗಳ ದೃಗ್ವಿಷಯವಹುದ । ಜ್ಞಾನಿಗಳಿಗೆ ಅಸಹ್ಯ ತೋರ್ಪುದು ।
ಮಾಣಿಕವ ಮರ್ಕಟನ ಕೈಯೊಳು ಕೊಟ್ಟ ತೆರನಂತೆ ॥ ॥೧೬-೨೨॥

ಶ್ರೀ ವಿಧೀರ ವಿಪಾಹಿಪೇಶ ಶಚೀವರಾತ್ಮಭವಾರ್ಕ ಶಶಿ ದಿ ।
ಗ್ದೇವ ಋಷಿ ಗಂಧರ್ವ ಕಿನ್ನರ ಸಿದ್ಧಸಾಧ್ಯಗಣಾ ॥
ಸೇವಿತಪದಾಂಭೋಜ ತತ್ಪಾದಾವಲಂಬಿಗಳಾದ ಭಕುತರ ।
ಕಾವ ಕರುಣಾಸಾಂದ್ರ ಲಕ್ಷ್ಮೀಹೃತ್ಕುಮುದಚಂದ್ರ ॥ ॥೧೬-೨೩॥

ಆದರುಶದ ಗತಾಕ್ಷ ಭಾಷಾ । ಭೇದದಿಂದಲಿ ಕರೆಯಲದನು ನಿ ।
ಷೇಧಗೈದವಲೋಕಿಸದೆ ಬಿಡುವರೇ ವಿವೇಕಿಗಳು ॥
ಮಾಧವನ ಗುಣ ಪೇಳ್ವ ಪ್ರಾಕೃತ । ವಾದರೆಯು ಸರಿ ಕೇಳಿ ಪರಮಾ ।
ಹ್ಲಾದಪಡದಿಪ್ಪರೆ ನಿರಂತರ ಬಲ್ಲ ಕೋವಿದರು ॥ ॥೧೬-೨೪॥

ಭಾಸ್ಕರನ ಮಂಡಲವ ಕಂಡು ನಮಸ್ಕರಿಸಿ ಮೋದಿಸದೆ ದ್ವೇಷದಿ ।
ತಸ್ಕರನು ನಿಂದಿಸಲು ಕುಂದಹುದೇ ದಿವಾಕರಗೆ ॥
ಸಂಸ್ಕೃತ ವಿದಲ್ಲೆಂದು ಕುಹಕ ತಿರಸ್ಕರಿಸಲೇನಹುದು ಭಕ್ತಿಪು ।
ರಸ್ಕರದಿ ಕೇಳ್ವರಿಗೆ ಒಲಿವನು ಪುಷ್ಕರಾಕ್ಷ ಸದಾ ॥ ||೧೬-೩೫||

ಪತಿತನ ಕಪಾಲದೊಳು ಭಾಗೀರಥಿಯ ಜಲವಿರೆ ಪೇಯವೆನಿಪುದೇ ।
ಇತರ ಕವಿನಿರ್ಮಿತ ಕುಕಾವ್ಯಾಶ್ರಾವ್ಯ ಬುಧರಿಂದ ॥
ಕೃತಿಪತಿಕಥಾನ್ವಿತವೆನಿಪ ಪ್ರಾಕೃತವೆ ತಾ ಸಂಸ್ಕೃತ ವೆನಿಸಿ ಸ ।
ದ್ಗತಿಯನೀವುದು ಭಕ್ತಿಪೂರ್ವಕ ಕೇಳಿ ಪೇಳ್ವರಿಗೆ ॥ ||೧೬-೩೬||

ವೇದಶಾಸ್ತ್ರಸಯುಕ್ತಿಗ್ರಂಥಗಳೋದಿಕೇಳ್ದವನಲ್ಲ ಸಂತತ ।
ಸಾಧುಗಳ ಸಹವಾಸಸಲ್ಲಾಪಗಳು ಮೊದಲಿಲ್ಲ ॥
ಮೋದತೀರ್ಥಾರ್ಯರ ಮತಾನುಗರಾದವರ ಕರುಣದಲಿ ಪೇಳ್ದೀ ರ ।
ಮಾಧವ ಜಗನ್ನಾಥವಿಠ್ಠಲ ತಿಳಿಸಿದದರೊಳಗೆ ॥ ||೧೬-೩೭||

ooooooooooooooooooooooooooooooooo